ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆಗಳನ್ನು ಮುಂದೂಡಿರುವ ಬಗ್ಗೆ

೨೭. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ಚುನಾವಣೆಗಳನ್ನು ಮುಂದೂಡಲು ಕಾರಣಗಳೇನು ?

(ಆ) ವಿವಿಧ ಕ್ಷೇತ್ರಗಳ ಸ್ಥಾನಗಳು ಮತ್ತು ಅವುಗಳಲ್ಲಿ ತೆರವಾದ ಸ್ಥಾನಗಳನ್ನು ತುಂಬಲು ನಡೆಸಬೇಕಾದ ಕ್ಷೇತ್ರಗಳ ವಿವರಗಳು,

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಈ ಚುನಾವಣೆಗಳನ್ನು ನಡೆಸುವುದು ರಾಜ್ಯ ಸರ್ಕಾರವಲ್ಲ. ಚುನಾವಣಾ ಆಯೋಗ, ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಅಸ್ತಿತ್ವಕ್ಕೆ ಬಂದಿರುವುದರಿಂದ ಈ ಬಗ್ಗೆ ೧೯೫೦ರ ಪ್ರಜಾಪ್ರಾತಿನಿಧ್ಯ ಅಧಿನಿಯಮದ ಳನೇ ಅನುಸೂಚಿಗೆ ಸೂಕ್ತ ತಿದ್ದುಪಡಿ ಆಗಬೇಕಾಗಿದೆ. ಈ ತಿದ್ದುಪಡಿ ಆದ ಹೊರತು ಚುನಾವಣೆಗಳನ್ನು ನಡೆಸಲು ಸಾಧ್ಯವಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಚುನಾವಣಾ ಆಯೋಗದೊಂದಿಗೆ ವ್ಯವಹರಿಸಿದೆ. ಆಯೋಗವು ತನ್ನ ಇತ್ತೀಚಿನ ದಿನಾಂಕ ೨೮-೪-೧೯೮೭ರ ಪತ್ರದಲ್ಲಿ ಸಂಸತ್ ಈ ಬಗ್ಗೆ ಕಾಯಿದೆಯನ್ನು ಮಾಡಿದ ಕೂಡಲೇ ಖಾಲಿ ಇರುವ ಸ್ಥಾನಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದೆ.

(ಆ)

I.	ವಿಧಾನ ಸಭಾ ಸದಸ್ಯರಿಂದ ಚುನಾಯಿಸಲ್ಪಡುವ ಸದಸ್ಯರು	೨೧	ಯಾವ
II.	ಪದವೀಧರರ ಕ್ಷೇತ್ರಗಳು	೦೬	ಸ್ಥಾನಗಳೂ
III.	ಶಿಕ್ಷಕರ ಕ್ಷೇತ್ರಗಳು	೦೬	ತೆರವಾಗಿಲ್ಲ
IV.	ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳು	೨೧	ಎಲ್ಲಾ ಸ್ಥಾನಗಳೂ ತೆರವಾಗಿವೆ.

೧.	ಬೀದರ್ ಸ್ಥಳೀಯ ಸಂಸ್ಥೆಗಳು	...	೦೧
೨.	ಗುಲ್ಬರ್ಗಾ ,,	...	೦೧
೩.	ಬಿಜಾಪುರ ,,	...	೦೧
೪.	ಬೆಳಗಾವಿ ,,	...	೦೨
೫.	ಉತ್ತರ ಕನ್ನಡ ,,	...	೦೧
೬.	ಧಾರವಾಡ ,,	...	೦೨
೭.	ರಾಯಚೂರು ,,	...	೦೧
೮.	ಬಳ್ಳಾರಿ ,,	...	೦೧
೯.	ಚಿತ್ರದುರ್ಗ ,,	...	೦೧
೧೦.	ಶಿವಮೊಗ್ಗ ,,	...	೦೧
೧೧.	ದಕ್ಷಿಣ ಕನ್ನಡ ,,	...	೦೧
೧೨.	ಚಿಕ್ಕಮಗಳೂರು ,,	...	೦೧
೧೩.	ಹಾಸನ ,,	...	೦೧
೧೪.	ತುಮಕೂರು ,,	...	೦೧
೧೫.	ಮಂಡ್ಯ ,,	...	೦೧
೧೬.	ಬೆಂಗಳೂರು ,,	...	೦೧
೧೭.	ಕೋಲಾರ ,,	...	೦೧
೧೮.	ಕೊಡಗು ,,	...	೦೧
೧೯.	ಮೈಸೂರು ,,	...	೦೧

V. ರಾಜ್ಯಪಾಲರಿಂದ ನಾನು ನಿರ್ದೇಶಿಸಲ್ಪಟ್ಟ ಸದಸ್ಯರು ... ೦೯ | ಯಾವ ಸ್ಥಾನಗಳು ತರವಾಗಿಲ್ಲ

ಇದರ ಹೊರತಾಗಿ, ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ನಾವು ಒಂದು ಠರಾವನ್ನು ಇಲ್ಲಿ ಮಾಡಿ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ ೬೫ ರಿಂದ ೭೫ಕ್ಕೆ ಏರಿಸಬೇಕೆಂದು ಕೇಂದ್ರಕ್ಕೆ ಕಳುಹಿಸಿದ್ದೇವೆ. ಆದಂ ಕೂಡ ಸಂಸತ್ತಿನಲ್ಲಿ ಸೂಕ್ತವಾದ ತಿದ್ದುಪಡಿಯಾಗಿದೆ. ಆದ್ದುದರಿಂದ ಆದಷ್ಟು ಬೇಗ ಈ ಚುನಾವಣೆ ಯನ್ನು ನಾವು ನಡೆಸುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ನೋ ಸಪ್ಲಿಮೆಂಟರಿ

ಮುಖ್ಯ ಮಂತ್ರಿಯವರ ವಿದೇಶ ಪ್ರವಾಸದ ಬಗ್ಗೆ

೩೨೨ ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ವರ್ಷದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ವಿದೇಶ ಪ್ರವಾಸ ಮಾಡಿದ ಮುಖ್ಯ ಮಂತ್ರಿಗಳ ಹಾಗೂ ಸಚಿವರುಗಳ ಜೊತೆಯಲ್ಲಿ ಪ್ರವಾಸ ಮಾಡಿದ ಒಟ್ಟು ಜನರ ಸಂಖ್ಯೆ ಎಷ್ಟು ?

ಆ) ಇವರಲ್ಲಿ ಸರ್ಕಾರಿ ವೆಚ್ಚದಲ್ಲಿ ಪ್ರವಾಸ ಮಾಡಿದ ವಿವಿಧ ಪಟ್ಟದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಹಾಗೂ ಕುಟುಂಬಗಳ ವಿವರಗಳನ್ನು ನೀಡುವುದೆ.

ಇ) ಈ ಪ್ರವಾಸದಿಂದ ಸರ್ಕಾರಕ್ಕೆ ಆದ ಒಟ್ಟು ವೆಚ್ಚವೆಷ್ಟು ಹಾಗೂ ಸರ್ಕಾರದ ಅಧೀನದಲ್ಲಿರುವ ವಿವಿಧ ಕಂಪನಿಗಳ ಲೆಕ್ಕದಲ್ಲಿ ಆಗಿರುವ ಪ್ರವಾಸದ ವೆಚ್ಚ ವೆಷ್ಟು ?

ಈ) ಈ ಪ್ರವಾಸದ ಉದ್ದೇಶಗಳೇನು? ಹಾಗೂ ಅವು ಸಫಲವಾಗಿವೆಯೇ? ಹಾಗಿದ್ದಲ್ಲಿ ಅವರ ವಿವರ ನೀಡುವುದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮುಖ್ಯ ಮಂತ್ರಿಗಳು ಮತ್ತು ಕೈಗಾರಿಕಾ ಸಚಿವರುಗಳೊಂದಿಗೆ ತಲಾ ಇಬ್ಬರು ಪ್ರವಾಸ ಮಾಡಿದ್ದಾರೆ.

ಆ) ಅ) ಮುಖ್ಯ ಮಂತ್ರಿಯವರೊಂದಿಗೆ,

೧) ಮುಖ್ಯಮಂತ್ರಿಗಳ ಪತ್ನಿ ಮತ್ತು

೨) ಮುಖ್ಯಮಂತ್ರಿಗಳ ಕಾರ್ಯದರ್ಶಿ

ಆ) ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಸಚಿವರೊಂದಿಗೆ,

೧) ಆಯುಕ್ತರು ಮತ್ತು ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ,

೨) ಆಯುಕ್ತರು ಮತ್ತು ಕಾರ್ಯದರ್ಶಿ, ಆರ್ಥಿಕ ಇಲಾಖೆ

ಇವರುಗಳು ಪ್ರವಾಸ ಮಾಡಿದ್ದಾರೆ.

ಇ) ೧) ಸರ್ಕಾರಕ್ಕೆ ಆದ ವೆಚ್ಚ ರೂ. ೩,೯೫,೦೪೫-೦೦

೨) ಸರ್ಕಾರದ ಅಧೀನದಲ್ಲಿರುವ ಕಂಪನಿಗಳ ಲೆಕ್ಕದಲ್ಲಿ ಆದ ವೆಚ್ಚ ಇಲ್ಲ

ಈ) ೧) ಕೆಲವು ದೇಶಗಳಲ್ಲಿರುವ ಕನ್ನಡ ಸಂಘಗಳ ಬಹಳ ದಿನಗಳ ಆಹ್ವಾನಗಳನ್ನು ಈಡೇರಿಸಲು ವುದು

೨) ರಾಜ್ಯದ ವಿವಿಧ ಅಭಿವೃದ್ಧಿ ಘಟಕಗಳಲ್ಲಿ ಬಂಡವಾಳವನ್ನು ತೊಡಗಿಸಲು ಅನಿವಾಸಿ ಭಾರತೀಯರನ್ನು ಭೇಟಿ ಮಾಡುವುದು ಮತ್ತು ಕೆಲವು ಕೈಗಾರಿಕಾ, ಘಟಕಗಳಿಗೆ ಭೇಟಿ ನೀಡಿರುವುದು